‘ಕುರುಕುರುತ್ತಮ್’ ಎಂಬ ಕಥಾಸಂಕಲನ ಸದ್ಯವೇ ಪ್ರಕಟವಾಗಲಿದೆ. ನನ್ನ ಸೃಜನಶೀಲ ಅಡುಗೆಮನೆಯ ಒಲೆಯ ಮೇಲೆ ಇನ್ನೆರಡು ಕೃತಿಗಳು ಸಿದ್ಧವಾಗುತ್ತಿವೆ. ಬರವಣಿಗೆಯಲ್ಲಿ ನನಗೆ ಪ್ರಯೋಗಗಳೆಂದರೆ ಇಷ್ಟ. ಸಂಪ್ರದಾಯ ಮತ್ತು ಆಧುನಿಕತೆಯನ್ನು ಸಂಪರ್ಕಿಸುವುದು ನನಗೆ ಇಷ್ಟವಾಗುತ್ತದೆ. ವೈಲೋಪಿಳ್ಳಿ ಶ್ರೀಧರ ಮೆನನ್, ಇಡಶ್ಶೆರಿ, ವಿಜಯಲಕ್ಷ್ಮಿ, ಸಿಲ್ವಿಯಾ ಪ್ಲಾತ್ ಅವರ ಕವಿತೆಗಳು ಮತ್ತು ಒ.ವಿ. ವಿಜಯನ್, ಮಾಧವಿ ಕುಟ್ಟಿ, ಕಾಫ್ಕಾ ಅವರ ಕಥೆಗಳು ನನ್ನನ್ನು ಬಹಳಷ್ಟು ಪ್ರಭಾವಿಸಿವೆ. ಸುಗತ ಕುಮಾರಿ ಮತ್ತು ವಿಜಯಲಕ್ಷ್ಮಿ ನನ್ನ ಇಷ್ಟದ ಬರಹಗಾರರು. ಪೂರಕವಲ್ಲದ ವಾತಾವರಣದಲ್ಲಿ ಬಾಳಿದ ಅವರು ತಮ್ಮ ದೃಢ ನಿರ್ಧಾರ ಮತ್ತು ನಿರಂತರತೆಯ ಮೂಲಕ ತಮ್ಮದೇ ಆದ ತಾವನ್ನು ಕಂಡುಕೊಂಡರು. ಶ್ರೀಜಾ ವಕ್ಕಂ, ಆರ್ಯಾಂಬಿಕೆ ಮತ್ತು ಲೋಪಾಮುದ್ರ ಅವರ ಸಾಧನೆಯನ್ನು ಕಂಡು ಬೆರಗಾಗಿದ್ದೇನೆ.

ಬೇರೆ ಬೇರೆ ಭಾಷೆಗಳಲ್ಲಿ ರಚನೆಯಾಗಿದ್ದರೂ ಭಾರತೀಯ ಸಾಹಿತ್ಯವು ಏಕರೂಪವಾದುದು. ಅವುಗಳ ಅಂತಃಪ್ರವಾಹದಲ್ಲಿ ಸಾಮ್ಯತೆಯಿದೆ. ದೀಬುಗಢದಲ್ಲಿ 2019ರಲ್ಲಿ ಸಾಹಿತ್ಯ ಅಕಾಡೆಮಿ ನಡೆಸಿದ ‘ಅಖಿಲ ಭಾರತ ಯುವ ಕವಿಗಳ ಸಮ್ಮೇಳನ’ದಲ್ಲಿ ಭಾಗವಹಿಸಿದಾಗ, ದೇಶದ ವಿವಿಧ ಸಾಂಸ್ಕೃತಿಕ ಹಿನ್ನೆಲೆಯ ಕುರಿತು ತಿಳಿದುಕೊಳ್ಳುವ ಅವಕಾಶ ಸಿಕ್ಕಿತು. ನನಗೆ ಸಣ್ಣಕಥೆಗಳ ಅರ್ಥ ಗೊತ್ತಾಗಲಿಲ್ಲ. ಆದರೆ ಕಾವ್ಯವು ಭಾಷೆಯನ್ನು ಮೀರಿದ್ದು ಎಂದೂ, ಕಥೆಗಳೆಂದರೆ ಭಾಷೆ ಮತ್ತು ವ್ಯಾಕರಣಗಳ ನೇಯ್ಗೆಯ ಕುಶಲತೆಯಲ್ಲಿ ಅರಳಿದ ಕೃತಿಗಳೆಂದೂ ಅರ್ಥವಾಯಿತು.

**8** ಮಲಯಾಳಂನಲ್ಲಿ ಈಗ ಸೃಜನಶೀಲ ಕೃತಿಗಳ ಸಂಖ್ಯೆ ಅಷ್ಟೇನೂ ಬರುತ್ತಿಲ್ಲ. ಎಲ್ಲರೂ ವೈಜ್ಞಾನಿಕ ಬರಹ, ಮಾಹಿತಿಪೂರ್ಣ ಬರಹಗಳನ್ನು ಬರೆಯುವುದರಲ್ಲಿ ತೊಡಗಿಕೊಂಡಿದ್ದಾರೆ. ಗದ್ಯವೇ ಹೆಚ್ಚು ಜನಪ್ರಿಯವಾಗಿದೆ. ಕಾವ್ಯವು ಕೆಲವು ವಲಯಗಳಿಗೆ ಸೀಮಿತವಾಗಿದೆ. ಇದು ಮುಂದೆ ಬದಲಾಗಲೂಬಹುದು.

ಪ್ರಸ್ತುತ ಬರಹಗಾರರು ತಂತ್ರಜ್ಞಾನ, ಸಾಮಾಜಿಕ ಮಾಧ್ಯಮ ಹಾಗೂ ಸಂವಾದಗಳ ಹೊಸ ವಾತಾವರಣವಿದೆ. ಬರವಣಿಗೆಯು ಈಗ ಒಂದು ಪ್ರಜ್ಞಾಪೂರ್ವಕ ವೃತ್ತಿಯಾಗಿದೆ. ಅದು ಮಾರ್ಕೆಟಿಂಗ್, ಪ್ರಕಾಶನ ಮತ್ತು ತೋರುಗಾಣಿಕೆ ಮುಂತಾದ ವಿಷಯಗಳಿಗೆ ಸಂಬಂಧಿಸಿದ್ದಾಗಿದೆ. ಬಹುಶಃ ಇದು ಜಾಗತಿಕವಾಗಿ ನಡೆಯುತ್ತಿರುವ ಬದಲಾವಣೆಯಿರಬೇಕು. ಮಲಯಾಳಂ ಕಾವ್ಯಕ್ಷೇತ್ರದ ವಿನ್ಯಾಸದಲ್ಲಿ ಕಂಡು ಬರುವ ಬದಲಾವಣೆ, ಸಣ್ಣಕಥೆಗಳಲ್ಲಿ ಗೋಚರಿಸುವ ಸಂವೇದನಾಶೀಲತೆ ಮತ್ತು ಕಾದಂಬರಿ ಕ್ಷೇತ್ರದಲ್ಲಿ ಕಾಣಿಸುವ ಪ್ರಾಯೋಗಿಕತೆ ಬಹಳ ಉತ್ಕೃಷ್ಟ ರೀತಿಯಲ್ಲಿ ಕಂಡು ಬರುತ್ತಿದೆ. ಪ್ರತಿಯೊಂದು ಪ್ರಕಾರವನ್ನು ಒಳಗೊಳ್ಳುವ ಪ್ರಯತ್ನವು ಸಾಹಿತ್ಯವನ್ನು ಮತ್ತಷ್ಟು ಸುಂದರವಾಗಿಸಿದೆ. ಈಗೀಗ ಸಾಹಿತ್ಯದಲ್ಲಿ ಸಿನಿಮಾಗಳಿಗೂ ಮಹತ್ವದ ಪಾತ್ರವಿದೆ. ಪುಸ್ತಕಗಳ ಹೊರತಾಗಿ ಸಾಹಿತ್ಯವು ಸಮಾಜದಲ್ಲಿ, ಸಂಸ್ಕೃತಿಯಲ್ಲಿ ತನ್ನ ಸ್ಥಾನ ಪಡೆದುಕೊಂಡಿದೆ.

●

